**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಜೆಎಂಎಫ್‌ಸಿ ನ್ಯಾಯಾಲಯ, ಕೆಜಿಎಫ್**

**ಸಿ.ಸಿ.ನಂ.393/2022**

ಚಾಸಾ:18 ಪ್ರಾಸಾ: 6

ದಿನಾಂಕಃ 16.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ಬಾಬು |
| ತಂದೆಯ ಹೆಸರು– | ಸಿದ್ದಪ್ಪ |
| ವಯಸ್ಸು – | 46 ವರ್ಷ |
| ಉದ್ಯೋಗ– | ಮುಖ್ಯ ಪೇದೆ, ಬೀರೂರು ಪೋಲೀಸ್ ಠಾಣೆ. |
| ವಾಸ– | ಅಜ್ಜಂಪುರ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

1. ನಾನು 2018 ರಿಂದ 2024 ರವರೆಗೆ ತರೀಕರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿನಾಂಕ 01.12.2021 ರಂದು ಮಧ್ಯಾಹ್ನ 1.00 ಗಂಟೆಗೆ ನಾನು ಠಾಣಾ ಪ್ರಭಾವದಲ್ಲಿರುವಾಗ ಚಾಸಾ–5 ರವರು ಠಾಣೆಗೆ ಹಾಜರಾಗಿ ನನ್ನ ಮುಂದೆ ಗಾಯಾಳು ಮಲ್ಲಪ್ಪರವರು ಅಪಘಾತದ ಗಾಯಗಳಿಂದ ಮೃತ ಪಟ್ಟಿರುತ್ತಾರೆಂದು ನೀಡಿದ ಹೇಳಿಕೆಯ ಮೇರೆಗೆ ನಾನು ಈ ಪ್ರಕರಣದಲ್ಲಿ ಭಾ ದಂ ಸಂ ಕಲಂ 304–ಎ ವನ್ನು ಮಾನ್ಯ ನ್ಯಾಯಾಲಯದ ಅನುಮತಿ ಮೇರೆಗೆ ಅಳವಡಿಸಿಕೊಂಡಿರುತ್ತೇನೆ.

3. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ–21 ರವರಿಗೆ ವಹಿಸಿ ಕೊಟ್ಟಿರುತ್ತೇನೆ.

4. ಈಗ ನನಗೆ ತೋರಿಸಿದ ದಾಖಲೆಯು ಚಾಸಾ–2 ರವರು ನನ್ನ ಮುಂದೆ ಸಲ್ಲಿಸಿದ ಹೇಳಿಕೆ ದೂರು ಆಗಿದ್ದು ಅದನ್ನು ನಿಪಿ.11 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ–11(ಎ) ಎಂದು ಗುರುತಿಸಲಾಯಿತು.

5. ಅದೇ ರೀತಿ ಈಗ ನನಗೆ ತೋರಿಸಿದ ದಾಖಲೆಯು ನಾನು ಅನುಮತಿ ಕೋರಿ ನ್ಯಾಯಾಲಯಕ್ಕೆ ಬರೆದ ಪತ್ರ ಹಾಗೂ ನಾ್ಯಯಾಲಯ ನೀಡಿದ ಅನುಮತಿ ಪತ್ರ ಆಗಿದ್ದು ಅದನ್ನು ಈಗ ನಿಪಿ–12 ಹಾಗೂ ಅದರ ಮೇಲೆ ಇರುವ ನನ್ನ ಸಹಿಯನ್ನು ನಿಪಿ–12(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಬಿ ವಕೀಲರಿಂದಃ**

6. ನಾನು ಚಾಸಾ-5 ರವರಿಂದ ಸುಳ್ಳು ಹೇಳಿಕೆ ಪಡೆದುಕೊಂಡು ಈ ಪ್ರಕರಣದಲ್ಲಿ ಕಲಂ 304-ಎ ಅನ್ನು ಅಳವಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಸದರಿ ಕಲಂ ಅಡಿಯಲ್ಲಿ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

Sd/-

(ಮುಜಫರ್)

ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ

ತರೀಕೆರೆ.